ಕೌನ್ಸಿಲ್ ನೇಮಕವಾದಮೇಲೆ ಈ ಒಂದು ವರ್ಷದಲ್ಲಿ ಎಷ್ಟು ಸಭೆಗಳನ್ನು ಕರೆದಿದ್ದಾರೆ ? ಮೂರನೆಯ ಪ್ರಶ್ನೆ ಏನೆಂದರೆ, ಆ ಕಲಾಶಾಲೆಯಲ್ಲಿ ಬಹಳ ಪರಂಪರಾನುಗತವಾಗಿ ಬಂದಂಥ ಕೋರ್ಸ್‌ಗಳನ್ನು ಸಂಪೂರ್ಣವಾಗಿ ಕೈಬಿಟ್ಟು ಹೊಸದಾಗಿ ಕೋರ್ಸ್‌ಗಳನ್ನು ತೆಗೆದುಕೊಳ್ಳತಕ್ಕ ಪ್ರವೃತ್ತಿ ಮಾಡಿದ್ದೀರಿ. ಇದಕ್ಕೆ ಏನು ಕಾರಣ ?

ಶ್ರೀ ಬಿ. ರಾಚಯ್ಯ.—ಆವರು ಈಗಾಗಲೇ ಒಂದು ವಿಸಿಟಿಂಗ್ ಕರೆದಿದ್ದಾರೆ. ಆ ವಿಸಿಟಿಂಗ್‌ನಲ್ಲಿ ಒಂದು ಮಾಸ್ಟರ್‌ಪ್ಲಾನ್ ತಯಾರುಮಾಡಿ ಅದಕ್ಕೆ ಅಪ್ರೂವಲ್ ಕೊಟ್ಟಿದ್ದಾರೆ. ಇದರ ಜೊತೆಯಲ್ಲಿ ಕೋರ್ಸ್‌ನ್ನು ಮುಂದುವರಿಸಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದಾರೆ. The courses are : 'A' Department of Fine Arts ; Portraits drawing and painting ; sculpture ; modelling, graphics ; history of art, aesthetics and criticism ; 'B' Department of Arts and crafts : Exteior design ; interior design, ceramics ; 'C' Department of visual communication: applied art, photography, photo journalism, film making, music and design.

ಶ್ರೀ ಎಂ. ವೀರಪ್ಪ ಮೊಯಿಲಿ.—ಯೂನಿವರ್ಸಿಟಿ ಅಫಿಲಿಯೇಷನ್‌ಗೆ ಏನಾದರೂ ಕೇಳಿದ್ದೀರಾ; ಕೇಳಿದ್ದರೆ ಅದಕ್ಕೆ ಯೂನಿವರ್ಸಿಟಿ ಸ್ಟೇಟಸ್ ಕೊಡತಕ್ಕ ಆಲೋಚನೆ ಏನಾದರೂ ತಮ್ಮಲ್ಲಿದೆಯೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಮತ್ತೊಂದು ವಿಚಾರ ಕರ್ನಾಟಕ ರಾಜ್ಯದಲ್ಲಿ ಪ್ರಧಾನವಾಗಿರತಕ್ಕಂತಹ ಸ್ಯಾಂಡಲ್ ಉಡ್ ಕೆಲಸ, ಬೆದರಿ ವರ್ಕ್, ಇಂತಹ ಕೆಲಸಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ, ಕಲಾ ಶಾಲೆಯಲ್ಲಿ ಅಳವಡಿಸಿ, ಇದನ್ನು ವೃದ್ಧಿಪಡಿಸುವುದಕ್ಕೆ ಆಲೋಚನೆ ಮಾಡಿದ್ದೀರಾ ?

ಶ್ರೀ ಬಿ. ರಾಚಯ್ಯ.—ಮಾನ್ಯ ವಿರೋಧಪಕ್ಷದ ನಾಯಕರು ಕೊಟ್ಟಂತಹ ಸಲಹೆಯನ್ನು ಕಲಾ ಶಾಲೆಯ ಅಕೆಡಮಿಕ್ ಕೌನ್ಸಿಲ್‌ನ ಮುಂದೆ ಇಡುತ್ತೇನೆ.

ಶ್ರೀ ಎಚ್. ಗಂಗಾಧರನ್.—ಮೈಸೂರಿನಲ್ಲಿ ಈಗ ಹಾಲಿ ಇರತಕ್ಕಂತಹ ಕಲಾ ಶಾಲೆಯು ಕಟ್ಟಡವನ್ನು ಕೈಗಾರಿಕೆ ಇಲಾಖೆಯವರು ಇಟ್ಟುಕೊಂಡಿದ್ದಾರೆ. ಆ ಕಟ್ಟಡದಲ್ಲಿ ಕಲಾಶಾಲೆಯ ಶಾಲೆಗಳನ್ನು ನಡೆಸುವುದಕ್ಕೆ ಅವಕಾಶ ವಾಗುವುದಿಲ್ಲ. ಇಲ್ಲದಿದ್ದರೆ ಕೈಗಾರಿಕಾ ಇಲಾಖೆಗೆ ಅದನ್ನು ಪೂರ್ತಿ ಬಿಟ್ಟು ಕೊಟ್ಟು, ಇವರಿಗೆ ಅರಮನೆಯನ್ನಾದರೂ ಕೊಡಿ. ಇಲ್ಲ, ಇವರಿಗೆ ಆ ಕಟ್ಟಡವನ್ನು ಬಿಡಿಸಿಕೊಟ್ಟು, ಕೈಗಾರಿಕಾ ಇಲಾಖೆಯವರಿಗೆ ಬೇರೆ ವ್ಯವಸ್ಥೆಯನ್ನಾದರೂ ಮಾಡಿ, ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ.—ಈಗ ಇರತಕ್ಕಂತಹ ಕಟ್ಟಡದಲ್ಲಿ ಆ ಶಾಲೆಯ ಶಾಲೆಗಳನ್ನು ನಡೆಸಿದ್ದಕ್ಕೂ ಹಾಗೂ ಅವರ ಕಾರ್ಯಾಗಾರವನ್ನು ಇಟ್ಟುಕೊಳ್ಳುವುದಕ್ಕೆ ಸ್ಥಳಾವಕಾಶ ಇಲ್ಲದೆ ತೊಂದರೆಯಾಗಿರತಕ್ಕಂತಹದ್ದು ನಮ್ಮ ಗಮನಕ್ಕೂ ಬಂದಿದೆ. ನಾವು ಆ ಕಟ್ಟಡವನ್ನು ಬಿಟ್ಟುಕೊಡಬೇಕೆಂದು ನಮ್ಮ ಇಲಾಖೆ ಹಾಗೂ ಕೈಗಾರಿಕಾ ಇಲಾಖೆಯವರೊಡನೆ ಚರ್ಚೆ ನಡೆಯುತ್ತಿದೆ. ನಿಮಗೆ ಬೇರೆ ಸ್ಥಳಾವಕಾಶವನ್ನು ಮಾಡಿಕೊಡಲಾಗುವುದು ನಮಗೆ ಈ ಕಟ್ಟಡವನ್ನು ಬಿಟ್ಟುಕೊಡಿ ಎಂಬುದಾಗಿ ಕೇಳುತ್ತಿದ್ದೇವೆ.

ಸಾತನೂರು ವಿಧಾನಸಭಾ ಕ್ಷೇತ್ರದಲ್ಲಿರುವ ಪಂಚಾಯಿತಿ ಕಟ್ಟಡಗಳ ರಿಪೇರಿಯ ಬಗ್ಗೆ

೧೨೮. ಶ್ರೀ ಕೆ. ಜಿ. ಶ್ರೀನಿವಾಸಮೂರ್ತಿ (ಸಾತನೂರು).—ಸನ್ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ ;

ಅ) ಸಾತನೂರು ವಿಧಾನ ಸಭಾ ಕ್ಷೇತ್ರದಲ್ಲಿರುವ ಪಂಚಾಯಿತಿಗಳ ಸಂಖ್ಯೆ ಎಷ್ಟು ?

ಆ) ಪಂಚಾಯಿತಿ ಇರುವ ಕಡೆಗಳಲ್ಲಿ ಎಷ್ಟು ಪಂಚಾಯಿತಿ ಕಟ್ಟಡಗಳಿವೆ, ಅವುಗಳಲ್ಲಿ ಎಷ್ಟು ಉಪಯೋಗಕ್ಕೆ ಬರುತ್ತಿವೆ ;

ಇ) ಉಪಯೋಗಕ್ಕೆ ಬರದೆ ಇರುವ ಕಟ್ಟಡಗಳನ್ನು ದುರಸ್ತಿಮಾಡಲು ಸರ್ಕಾರ ಕೈಕೊಂಡ ಕ್ರಮವೇನು ;

ಈ) ಪಂಚಾಯ್ತಿ ಕಟ್ಟಡಗಳೇ ಇಲ್ಲದಿರುವ ಕಡೆ ಪಂಚಾಯ್ತಿ ಕಟ್ಟಡ ಕಟ್ಟಿಸಿಕೊಡಲು ಸರ್ಕಾರವು ಯೋಚಿಸಿದೆಯೋ ಹಾಗಿದ್ದಲ್ಲಿ ಕಟ್ಟಡವನ್ನು ಯಾವಾಗ ನಿರ್ಮಿಸಲಾಗುವುದು ?

ಶ್ರೀ ಅಬ್ದುಲ್ ನಜೀರ್‌ಸಾಬ್ ಸನ್ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ಯ ಸಚಿವರು.—

ಅ) ಒಟ್ಟು ೫೫.

ಆ) ೧) ೨೩ ಪಂಚಾಯಿತಿ ಕಟ್ಟಡಗಳಿವೆ.

೨) ಅವುಗಳೆಲ್ಲವೂ ಉಪಯೋಗದಲ್ಲಿರುತ್ತವೆ.

ಇ) ಉಪಯೋಗಕ್ಕೆ ಬರದೆ ಇರುವ ಕಟ್ಟಡಗಳು ಯಾವುದೂ ಇರುವುದಿಲ್ಲವಾದುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ೩೦ ಪಂಚಾಯ್ತಿಗಳಿಗೆ ಪಂಚಾಯ್ತಿ ಕಟ್ಟಡಗಳನ್ನು ಕಟ್ಟಬೇಕಾಗಿದ್ದು ಈ ಪೈಕಿ ೯ ಗ್ರಾಮ ಪಂಚಾಯ್ತಿಗಳಲ್ಲಿ ಕಟ್ಟಡಗಳು ಹೊಸದಾಗಿ ನಿರ್ಮಾಣವಾಗುತ್ತಿರುತ್ತವೆ. ಉಳಿದ ೨೧ ಪಂಚಾಯ್ತಿಗಳಿಗೆ ಹೊಸೆಯುವ ಹಣವನ್ನು ಗಣನೆಗೆ ತೆಗೆದು ಕೊಂಡು ಪಂಚಾಯ್ತಿ ಕಟ್ಟಡ ಕಟ್ಟಲಂ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಜಿ. ಶ್ರೀನಿವಾಸಮೂರ್ತಿ.—ನನ್ನ ಕ್ಷೇತ್ರಕ್ಕೆ ಚನ್ನಪಟ್ಟಣ ತಾಲ್ಲೂಕಿನ ಕೆಲವು ಪಂಚಾಯಿತಿಗಳು ಸೇರಿವೆ. ಅಲ್ಲಿ ಎಷ್ಟು ಪಂಚಾಯಿತಿ ಕಟ್ಟಡಗಳನ್ನು ಕಟ್ಟಿದ್ದೀರಿ ? ಅದೇ ರೀತಿ ಕನಕಪುರ ತಾಲ್ಲೂಕಿನಲ್ಲಿ ಎಷ್ಟು ಪಂಚಾಯಿತಿ ಕಟ್ಟಡಗಳನ್ನು ಕಟ್ಟಿದ್ದೀರಿ ? ವಿರೂಪಾಕ್ಷಪುರ ಹೋಬಳಿಯ ವಿರೂಪಾಕ್ಷ ಪುರದಲ್ಲಿ ಪಂಚಾಯಿತಿ ಕಟ್ಟಡವನ್ನು ಕಟ್ಟಲಾಗುತ್ತದೆಯೇ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಹೋಬಳಿ ವೈಸ್ ಅಂಕಿ ಅಂಶಗಳು ನನ್ನಲ್ಲಿಲ್ಲ. ಸಾತನೂರು ಹೋಬಳಿಯಲ್ಲಿ ೯ ಪಂಚಾಯಿತಿ ಕಟ್ಟಡಗಳನ್ನು ಕಟ್ಟಲಾಗುತ್ತಿದೆ. ಅವುಗಳ ಹೆಸರನ್ನು ಹೇಳುತ್ತೇನೆ. ಅಲನಂದ್ ಹಳ್ಳಿ, ಮಳಿಹಳ್ಳಿ, ಹುಣಗಂದ, ಬೇಡಿಕಟ್ಟೆ, ಈ ರೀತಿ ೯ ಪಂಚಾಯಿತಿ ಕಟ್ಟಡಗಳನ್ನು ಕಟ್ಟಲಾಗುತ್ತಿದೆ.

ಶ್ರೀ ಕೆ. ಜಿ. ಶ್ರೀನಿವಾಸಮೂರ್ತಿ.—ವಿರೂಪಾಕ್ಷ ಪುರಕ್ಕೆ ಪಂಚಾಯಿತಿ ಕಟ್ಟಡವನ್ನು ಕಟ್ಟಲಾಗುತ್ತಿದೆಯೋ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಯಾವ ಹೋಬಳಿಗೆ ಸೇರಿದೆ ಎನ್ನುವ ಬಗ್ಗೆ ಮತ್ತೆ ಹೋಬಳಿ ವೈಸ್ ಅಂಕಿ ಅಂಶ ಗಳನ್ನು ಸದ್ಯಕ್ಕೆ ನನ್ನಲ್ಲಿಲ್ಲ.

ಶ್ರೀ ಕೆ.ಜಿ ಶ್ರೀನಿವಾಸಮೂರ್ತಿ.—೫೫ ಪಂಚಾಯಿತಿಗಳು ಇವೆ ಅಂತ ಹೇಳಿದ್ದೀರಿ. ಇದರಲ್ಲಿ ೨೩ ಪಂಚಾಯಿತಿ ಕಟ್ಟಡಗಳನ್ನು ಕಟ್ಟಿದ್ದೇವೆ ಎಂಬುದಾಗಿ ಹೇಳಿದ್ದೀರಿ. ನನ್ನ ಕ್ಷೇತ್ರದಲ್ಲಿರುವ ವಿರೂಪಾಕ್ಷ ಪುರ ಹೋಬಳಿಯಲ್ಲಿ ಎಷ್ಟು ಪಂಚಾಯಿತಿ ಕಟ್ಟಡಗಳನ್ನು ಕಟ್ಟಿದ್ದೀರಿ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಸಾತನೂರು ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಮಾಹಿತಿಯನ್ನು ಒದಗಿಸಲಾಗಿದೆ. ಪಾವನ್ ಅದಸ್ಕರಿಗೆ ವಿರೂಪಾಕ್ಷಪುರ ಹೋಬಳಿಗೆ ಸಂಬಂಧಪಟ್ಟಂತೆ ಬೇಕಾದರೆ ಪ್ರತ್ಯೇಕವಾಗಿ ವಿವರವನ್ನು ಒದಗಿಸಿಕೊಡಲಾಗುವುದು.

ತಿಪಟೂರು ಟೌನಿನ ಹೆಣ್ಣುಮಕ್ಕಳ ಪ್ರೌಢಶಾಲೆಯ ಬಗ್ಗೆ

೧೫೪. ಶ್ರೀ ಎಸ್. ಪಿ ಗಂಗಾಧರಪ್ಪ. (ತಿಪಟೂರು).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ತಿಪಟೂರು ಟೌನಿನ ಹೆಣ್ಣು ಮಕ್ಕಳ ಪ್ರೌಢಶಾಲೆ ಹಳೇ ಹೆರಿಗೆ ಆಸ್ಪತ್ರೆ ಕಟ್ಟಡದಲ್ಲಿ ನಡೆಯುತ್ತಿರುವುದು ಹಾಗೂ ಸಾಕಷ್ಟು ಸ್ಥಳಾವಕಾಶವಿಲ್ಲದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ. ಹಾಗಿದ್ದಲ್ಲಿ ಹೆಚ್ಚು ಕೊಠಡಿಗಳನ್ನು ಕಟ್ಟಿಸಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?